# ಬುರ್ಖಾ ಧರಿಸಿದ್ದು.. ಮಸೀದಿ ನೋಡಿದ್ದು..

ಹಳೆಯ ನೆನಪುಗಳನ್ನು ಮೆಲುಕು ಹಾಕುವುದರಲ್ಲಿ ಏನೋ ಖುಷಿ, ಪುಳಕ, ಸುಖ, ಸಂತೋಷ ಹಾಗೂ ರೋಮಾಂಚನ. ಈ ಎಲ್ಲಾ ಭಾವನೆಗಳನ್ನು ಒಟ್ಟುಗೂಡಿಸಿದಂತಹ ಬೆಚ್ಚನೆಯ ಭಾವ ಸವಿ ನೆನಪುಗಳಾಗಿ ಬದುಕಿಗೆ ಸಂತಸ ಕೊಡುತ್ತದೆ. ನಾವು ದುಬೈ, ಅಬುದಾಬಿ ಸಂದರ್ಶಿಸಿ ಬಂದದ್ದೇ ಎಂದೂ ಮರೆಯಲಾಗದ ಸಿಹಿ ಸಿಹಿ ನೆನಪು..!

■ **ಸಾವಿತ್ರಿ ಹೊಳ್ಳ ಕಟೀಲು**

ಅನೇಕ ವರ್ಷಗಳ ಕಾಲ ದುಡಿದ ಮೇಲೆ ಒಮ್ಮೆ ಎಲ್ಲಿಯಾದರೂ ಹೋಗಿ ಬರೋಣ ಎನಿಸುವುದು ಸಹಜ. ಕುಟುಂಬ ಸದಸ್ಯರ ಜತೆಗಿನ ಪ್ರವಾಸ ಕೂಡ ಅನೇಕ ಸಲ ಸವಿನೆನಪುಗಳ ಸಾಲಿನಲ್ಲೇ ಸೇರುತ್ತದೆ. ಎಂದೂ ಮರೆಯಲಾಗದ ಪುಳಕವಾಗಿ ಜೀವನದ ಪುಟಗಳಲ್ಲಿ ಸೇರಿಹೋಗುತ್ತದೆ.

ಕಟೀಲು ಶ್ರೀ ದುರ್ಗಾ ಪರಮೇಶ್ವರಿ ವಿದ್ಯಾಲಯದಲ್ಲಿ ನಾನು ಶಿಕ್ಷಕಿಯಾಗಿ ನಿವೃತ್ತಳಾದ ಬಳಿಕ ಪತಿಯ ಜತೆಗೂಡಿ ದೆಹಲಿಗೆ ಹೋಗಿ ಅಲ್ಲಿಂದ ಮಗಳ ಸಂಸಾರದ ಜತೆಗೆ ವಾಯವ್ಯ ಭಾರತದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬಂದೆವು. ಅದಾಗಿ ಎರಡು ವರ್ಷ ಹಿಂದೆ ನಮ್ಮ ಕಿರಿಯ ಮಗ ರಾಮಪ್ರಕಾಶನ ನೇತೃತ್ವದಲ್ಲಿ ದತ್ತಾತ್ರೇಯ ಕ್ಷೇತ್ರಗಾಣಗಾಪುರ ಹಾಗೂ ಉತ್ತರ ಪ್ರಯಾಗ, ಕಾಶಿ, ಅಯೋಧ್ಯಾ, ಬುದ್ಧ ಗಯಾ ಮತ್ತು ಗಯಾ ಕ್ಷೇತ್ರಗಳ ಯಾತ್ರೆಯೂ ಆಗಿತ್ತು.

ಭಾರತದ ಅನೇಕ ಸ್ಥಳ ನೋಡಿದ ಮೇಲೆ ಮನಸ್ಸಿನಲ್ಲಿ ಚಿಗುರೊಡೆದದ್ದು ವಿದೇಶ ಯಾತ್ರೆ ಕೈಗೊಳ್ಳುವ ಕನಸು. ಇದನ್ನು ಈಡೇರಿಸಿದ್ದು ಅಮೆರಿಕದಲ್ಲಿದ್ದ ನಮ್ಮ ಮಗ ಗಣೇಶ. ನಮ್ಮನ್ನು ಅಬುದಾಬಿಗೆ ಕರೆದುಕೊಂಡು ಹೋಗಿ ಅಲ್ಲಿ ಅನೇಕ ಸ್ಥಳಗಳನ್ನು ನೋಡುವ ಸುಯೋಗ ನಮ್ಮದಾಯಿತು. ಆದರೆ ಒಮ್ಮಿಂದೊಮ್ಮೆಯೇ ಕೈಗೊಂಡ ನಿರ್ಧಾರವಾದ್ದರಿಂದ ಅಬುದಾಬಿಗೆ ನೇರ ವಿಮಾನ ಟಿಕೇಟು ಸಿಗಲಿಲ್ಲ. ಬೆಂಗಳೂರಿನಿಂದ ಮಸ್ಕತ್ ಅಲ್ಲಿಂದ ದುಬೈ, ದುಬೈಯಿಂದ ಕಾರಿನಲ್ಲಿ ಅಬುದಾಬಿಗೆ ಹೋಗಬೇಕಾಗಿ ಬಂತು. ಬೆಂಗಳೂರಿನಿಂದ ಹೊರಟ ನಾವು ಮೊದಲು ಓಮನ್‌ನ ರಾಜಧಾನಿ ಮಸ್ಕತ್ ತಲುಪಿದೆವು. ವಿಮಾನ ನಿಲ್ದಾಣದಿಂದ ಹೊರಗೆ ದೂರಕ್ಕೆ ಕಣ್ಣಾಡಿಸಿದಾಗ ನಮಗೆ ಮರಗಿಡಗಳಿಲ್ಲದ ಒಣ ಮರುಭೂಮಿ ಹಾಗೂ ಅಲ್ಲಲ್ಲಿ ಖರ್ಜೂರದ ಮರಗಳಷ್ಟೇ ಗೋಚರಿಸುತ್ತಿದ್ದುವು.

ಮಸ್ಕತ್ತಿನಿಂದ ಇನ್ನೊಂದು ವಿಮಾನವೇರಿ ದುಬೈ ಸೇರಿದಾಗ ವಿಮಾನ ನಿಲ್ದಾಣಕ್ಕೆ ನಮ್ಮ ಶ್ರುತಿ, ಅವಳ ಗಂಡ ಸಂದೀಪ್ ಮತ್ತು ಮಗು ಶ್ರಾವ್ಯ ನಮ್ಮ ಸ್ವಾಗತಕ್ಕಾಗಿ ಬಂದಿದ್ದರು. ಅಲ್ಲಿಂದ ಅವರು ತಮ್ಮ ಕಾರಿನಲ್ಲಿ ಅಬುಧಾಬಿಯ ತಮ್ಮ ಮನೆಗೆ ಕರೆದೊಯ್ದರು. ಅವರ ಮನೆ ಅಚ್ಚುಕಟ್ಟಾಗಿತ್ತು. ಮಗು ಶ್ರಾವ್ಯಾಳಿಗೆ ನಮ್ಮನ್ನು ಕಂಡು ಎಲ್ಲಿಲ್ಲದ ಸಂತೋಷ. ಅವಳ ಆಟ–ಪಾಠಗಳಿಂದ ನಮಗೆ ಅಲ್ಲಿದ್ದ ದಿನಗಳ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಅಬುದಾಭಿಯು ಜಗತ್ತಿನ ಬೃಹತ್ ತೈಲ ನಿಕ್ಷೇಪ ರಾಷ್ಟ್ರಗಳಲ್ಲಿ ಐದನೆಯ ಮತ್ತು ಸ್ವಾಭಾವಿಕ ಅನಿಲದ ನಿಕ್ಷೇಪಗಳಲ್ಲಿ ಆರನೆಯ ಸ್ಥಾನದಲ್ಲಿದೆ.

ಅಬುದಾಭಿಯಲ್ಲಿ ಅಲ್ಲಿನ ಪ್ರಸಿದ್ಧ ಶೇಖ್ ಜಾಹಿದ್ ಗ್ರ್ಯಾಂಡ್ ಮಸೀದಿ ನೋಡಲು ಹೋಗಿದ್ದೆವು. ಮಸೀದಿಯನ್ನು ಪ್ರವೇಶಿಸಲು ಯಾವುದೇ ಧರ್ಮದ ಹೆಂಗಸರು ಬುರ್ಖಾ ಧರಿಸಬೇಕಿತ್ತು ಅಥವಾ ತಲೆಗೆ ಶಾಲನ್ನು ಸುತ್ತಿಕೊಳ್ಳಬೇಕಿತ್ತು. ಮುಸ್ಲಿಮರಲ್ಲದ ಹೆಂಗಸರಿಗೆ ಬೂದು ಬಣ್ಣದ ಬುರ್ಖಾ ಕೊಡಲಾಗುತ್ತಿತ್ತು. ಒಬ್ಬರು ಧರಿಸಿದ್ದ ಬುರ್ಖಾವನ್ನು ಒಗೆದು



ಶುಚಿಗೊಳಿಸಿಯೇ ಬೇರೆಯವರಿಗೆ ಕೊಡುವ ಶಿಸ್ತು ಮೆಚ್ಚುವಂಥದ್ದು.

ನನಗೆ ನಡೆಯಲು ಕಷ್ಟವಾಗುತ್ತಿದ್ದುದರಿಂದ ನನ್ನ ಮಗ ವ್ಹೀಲ್ ಚೈರ್‌ನಲ್ಲಿ ನನ್ನನ್ನೂ ಪುಟ್ಟ ಮಗು ಶ್ರಾವ್ಯಾಳನ್ನೂ ಕುಳ್ಳಿರಿಸಿ ದೂಡಿಕೊಂಡು ಹೋದ ಆ ಅನುಭವ ನೆನಪಿನ ಸರಮಾಲೆಯಾಗಿ ಬದುಕಿಗೆ ಸಂತಸವೀಯುತ್ತದೆ. ನಾನೂ ಶ್ರುತಿಯೂ ಬುರ್ಖಾ ಧರಿಸಿ ಮಸೀದಿಯನ್ನು ಪ್ರವೇಶಿಸಿ ಅಲ್ಲಿನ ಸೌಂದರ್ಯವನ್ನು ವೀಕ್ಷಿಸಿದೆವು. ಆ ಬೃಹತ್ ಮಸೀದಿ ಅದ್ಭುತವಾಗಿತ್ತು. ವಿಶಾಲವಾದ ಪ್ರಾರ್ಥನಾ ಸ್ಥಳದಲ್ಲಿ ಮೆದುವಾದ ಸುಂದರ ಹಾಸನ್ನು ಹಾಸಲಾಗಿತ್ತು.. ಗೋಡೆಗಳಲ್ಲಿ ಕೆತ್ತಲಾದ ಚಿತ್ತಾರಗಳು ಚಿತ್ತಾಕರ್ಷಕವಾಗಿದ್ದುವು.

ಅಬುದಾಬಿಯಲ್ಲಿ ಖಲೀಫರ, ಈಗ ಹೋಟೆಲಾಗಿರುವ ಅರಮನೆಯನ್ನು ಹಾಗೂ ಈಗಿನ ಅರಮನೆಯನ್ನು ನೋಡಿದೆವು. ಇಲ್ಲಿನ ಮಸ್ದಾರ್ ನಗರದಲ್ಲಿ ಹೆಚ್ಚು ವಾತಾವರಣ ಮಾಲಿನ್ಯ ಉಂಟು ಮಾಡದ ಹೊಸ ರೀತಿಯ ವಿದ್ಯುದುತ್ಪಾದನಾ ತಂತ್ರದ ಅಭಿವೃದ್ಧಿ ಮಾಡಲಾಗುತ್ತದೆ. ಅಲ್ಲಿ ನಾವು ಚಾಲಕನಿಲ್ಲದೆ ಚಲಿಸುವ ಕಾರುಗಳನ್ನೂ ಮೊನೋ ರೈಲನ್ನೂ ನೋಡಿದೆವು ಹಾಗೂ ಮೊನೋ ರೈಲ್‌ನಲ್ಲಿ ಪ್ರಯಾಣದ ಹೊಸ ಅನುಭವವನ್ನು ಪಡೆದೆವು.

ದುಬೈಯಲ್ಲಿ ಜಗತ್ತಿನ ಅತಿ ಎತ್ತರದ 'ಬುರ್ಜ್ ಖಲೀಫಾ' ಎಂಬ 160 ಮಹಡಿಗಳುಳ್ಳ ದೊಡ್ಡ ಗೋಪುರದಂತಹ ಕಟ್ಟಡದ 124ನೇ ಮಾಳಿಗೆಯ ತನಕ ಲಿಫ್ಟಿನಲ್ಲಿ ಹೋದೆವು. ಈ ಲಿಫ್ಟ್ ಜಗತ್ತಿನಲ್ಲೇ ಅತಿ ವೇಗದ ಲಿಫ್ಟ್ ಆಗಿದ್ದು ಕೇವಲ ಒಂದು ನಿಮಿಷದಲ್ಲಿ 124ನೇ ಮಾಳಿಗೆಗೆ ನಮ್ಮನ್ನು ಕೊಂಡೊಯ್ದಿತ್ತು. ಅಲ್ಲಿಂದ 125ನೇ ಮಹಡಿಯನ್ನೇರಿ ದುಬೈಯ ನೋಟವನ್ನು ಕೆಮರಾದಲ್ಲಿ ಸೆರೆ ಹಿಡಿದೆವು.

ದುಬೈಯ ಸಂದರ್ಶಕರು ಅಲ್ಲಿನ ಬಂಗಾರದೊಡವೆಗಳ ಲೋಕವನ್ನು ಸಂದರ್ಶಿಸದೆ ಬರುವುದಿಲ್ಲ. ತರ ತರದ ಡಿಸೈನ್‌ನ ಝಗಝಗಿಸುವ ಸುಂದರ ಆಭರಣಗಳಿಂದ ತುಂಬಿದ ನೂರಾರು ಮಳಿಗೆಗಳಿದ್ದ ವಿಶಾಲ ಕಟ್ಟಡವು ಸಂದರ್ಶಕರನ್ನು ಕೈ ಬೀಸಿ ಕರೆಯುತ್ತಿದೆ.

ಹಳೆಯ ನೆನಪುಗಳನ್ನು ಮೆಲುಕು ಹಾಕುವುದರಲ್ಲಿ ಏನೋ ಖುಷಿ, ಪುಳಕ, ಸುಖ, ಸಂತೋಷ ಹಾಗೂ ರೋಮಾಂಚನ. ಈ ಎಲ್ಲಾ ಭಾವನೆಗಳನ್ನು ಒಟ್ಟುಗೂಡಿಸಿದಂತಹ ಬೆಚ್ಚನೆಯ ಭಾವ ಸವಿ ನೆನಪುಗಳಾಗಿ ಬದುಕಿಗೆ ಸಂತಸ ಕೊಡುತ್ತದೆ. ■